# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 75 |
| ಸದಸ್ಯರ ಹೆಸರು | : | ಶ್ರೀ ಬಿ.ಎಂ. ಫಾರೂಕ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 13-02-2024 |
| ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2021-22ನೇ ಸಾಲಿನಿಂದ ಇಲ್ಲಿಯವರೆಗೆ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಸ್ಮಾರ್ಟ್ ಸಿಟಿ ಕಾಮಗಾರಿಗಳ ವಿವರ ಕುರಿತಂತೆ ವರ್ಷವಾರು ಕಾಮಗಾರಿವಾರು ವಿವರ ನೀಡುವುದು; | ಮಂಗಳೂರು ನಗರದಲ್ಲಿ ಸ್ಮಾರ್ಟ್ ಸಿಟಿ ಅಭಿಯಾನದಡಿ 2021-22ನೇ ಸಾಲಿನಿಂದ ಇಲ್ಲಿಯವರೆಗೆ ವರ್ಷವಾರು ಕೈಗೊಂಡಿರುವ ಕಾಮಗಾರಿಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ |
| ಆ) | ಮಂಗಳೂರು ಸ್ಮಾರ್ಟ್ ಸಿಟಿ ವತಿಯಿಂದ ಎಮ್ಮೆ ಕೆರೆಯಲ್ಲಿ ನಿರ್ಮಾಣ ಮಾಡಿರುವ ಈಜುಕೊಳ ಕಾಮಗಾರಿಯ ಅಂದಾಜು ಮೊತ್ತ ಹಾಗೂ ವೆಚ್ಚವೆಷ್ಟು; (ಮಾಹಿತಿ ನೀಡುವುದು) | ಸ್ಮಾರ್ಟ್ ಸಿಟಿ ಅಭಿಯಾನದಡಿ ಮಂಗಳೂರು ನಗರದಲ್ಲಿ ಎಮ್ಮೆಕೆರೆ ಈಜುಕೊಳ ಕಾಮಗಾರಿಯನ್ನು ರೂ.24.94 ಕೋಟಿ ಮೊತ್ತದಲ್ಲಿ ಕೈಗೊಳ್ಳಲಾಗಿದೆ. ಈ ಮೊತ್ತದಲ್ಲಿ, ಈಜುಕೊಳದ ಕಾಮಗಾರಿಗೆ ರೂ.22.79 ಕೋಟಿ ವೆಚ್ಚ ಮಾಡಲಾಗಿದೆ ಹಾಗೂ ರೂ. 2.15 ಕೋಟಿ ಮೊತ್ತವನ್ನು ಈಜುಕೊಳದ 3 ವರ್ಷಗಳ ಕಾರ್ಯಾಚರಣೆ ಹಾಗೂ ನಿರ್ವಹಣೆಗಾಗಿ ಮೀಸಲಿರಿಸಲಾಗಿದೆ. |
| ಇ) | ಸದರಿ ಈಜುಕೊಳ ಪ್ರಾರಂಭವಾದ ಕೆಲವೇ ದಿನಗಳಲ್ಲಿ ಮುಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>ಎಮ್ಮೆಕೆರೆ ಈಜುಕೊಳವನ್ನು ದಿನಾಂಕ: 24.11.2023 ರಂದು ಉದ್ಘಾಟನೆ ಮಾಡಲಾಗಿರುತ್ತದೆ. |
| ಈ) | ಬಂದಿದ್ದಲ್ಲಿ, ಅದನ್ನು ಪುನರ್ ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮವೇನು? | ಎಮ್ಮೆಕೆರೆ ಈಜುಕೊಳವನ್ನು ಅಂತರಾಷ್ಟ್ರೀಯ ಈಜುಕೊಳದ ಮಾನದಂಡಗಳ ಅನುಸಾರ ನಿರ್ಮಿಸಲಾಗಿದ್ದು, ಅಭ್ಯಾಸ ಕೊಳದ ಆಳವು 2.20 ಮೀಟರ್ ಇರುತ್ತದೆ. ಆದುದರಿಂದ, ಈಜುಕೊಳದ ನಿರ್ವಹಣೆಗಾಗಿ ತಜ್ಞರ ಅವಶ್ಯಕತೆ ಇರುತ್ತದೆ.<br><br>ಅದರಂತೆ, ಈಜುಕೊಳದ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಹಾಗೂ ರಾಷ್ಟ್ರೀಯ/ಅಂತರಾಷ್ಟ್ರೀಯ ಮಟ್ಟದ ಕ್ರೀಡೆಗಳನ್ನು ಆಯೋಜಿಸಲು ಮತ್ತು ಈಜುಗಾರರಿಗೆ ತರಬೇತಿ ನೀಡಲು ಹಾಗೂ ಸಾರ್ವಜನಿಕರಿಗೆ ಈಜುಕೊಳ ಉಪಯೋಗಿಸಲು ಅನುಮತಿ ನೀಡುವ ಬಗ್ಗೆ ವಿಷಯ ತಜ್ಞರು, ಅಧಿಕಾರಿಗಳು ಹಾಗೂ ಸಂಘ ಸಂಸ್ಥೆಗಳೊಂದಿಗೆ ದಿನಾಂಕ: 17.01.2024 ರಂದು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಪೂರ್ವಭಾವಿ ಸಭೆಯನ್ನು ನಡೆಸಲಾಗಿದೆ.<br><br>ಮೇಲ್ಕಂಡ ವಿಷಯಗಳನ್ನು ಅನುಷ್ಠಾನಗೊಳಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ. |

| | | |
|---|---|---|
| | | ಸದರಿ ಸಮಿತಿಯು ನೀಡುವ ಸಲಹೆಗಳ ಅನುಸಾರ ಈಜುಕೊಳದ ನಿರ್ವಹಣೆಗೆ ಕಾರ್ಯಸೂಚಿಯನ್ನು ಸಿದ್ಧಪಡಿಸಿ ಎಮ್ಮೆಕೆರೆ ಈಜುಕೊಳವನ್ನು ರಾಷ್ಟ್ರೀಯ/ಅಂತಾರಾಷ್ಟ್ರೀಯ ಮಟ್ಟದ ಕ್ರೀಡೆಗಳಿಗೆ, ತರಬೇತಿಗೆ ಹಾಗೂ ಸಾರ್ವಜನಿಕರ ಬಳಕೆಗೆ ಉಪಯೋಗಿಸಲು ಕ್ರಮವಹಿಸಲಾಗುವುದು. |

ಸಂಖ್ಯೆ:ನಅಇ 26 ಸಿಎಸ್ಎಸ್ 2024

**(ಬಿ.ಎಸ್.ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ
ಸಚಿವರು

ಅನುಬಂಧ-1

# ಅನುಬಂಧ – 1

## ಮಂಗಳೂರು ಸ್ಮಾರ್ಟ್‌ಸಿಟಿ ಲಿಮಿಟೆಡ್

## ಪೂರ್ಣಗೊಂಡ ಕಾಮಗಾರಿಗಳು

### 2021-22 ನೇ ಆರ್ಥಿಕ ವರ್ಷ

| ಕ್ರ.ಸಂ | ಕಾಮಗಾರಿಯ ಹೆಸರು | DPR ಮೊತ್ತ | ಕಾರ್ಯದೇಶ ಮೊತ್ತ | ಕಾರ್ಯದೇಶ ನೀಡಿದ ದಿನಾಂಕ | ಕಾಮಗಾರಿ ಪೂರ್ಣಗೊಂಡ ದಿನಾಂಕ | 2021-22 ರಲ್ಲಿ ಸಾಧಿಸಲಾದ ಪ್ರಗತಿ (ಕೋ.ರೂಗಳಲ್ಲಿ) | ಅಂತಿಮ ಬಿಲ್ ಮೊತ್ತ | ಕಾಮಗಾರಿಯ ಪ್ರಸ್ತುತ ಸ್ಥಿತಿ |
|---|---|---|---|---|---|---|---|---|
| 1 | ಕದ್ರಿ ಉದ್ಯಾನವನದ ರಸ್ತೆ ಹಾಗೂ ಉದ್ಯಾನವನದ ಆವರಣದ ಹೊರಗೆ ಸಮಗ್ರ ಅಭಿವೃದ್ಧಿ ಕಾಮಗಾರಿ ಹಂತ-2 | 4.50 | 4.50 | 16.12.2021 | 31.12.2022 | 0.61 | 4.50 | ಕಾಮಗಾರಿ ಪೂರ್ಣಗೊಂಡಿದೆ |
| 2 | ಮಂಗಳಾದೇವಿ ರಸ್ತೆಯಲ್ಲಿ ವಿದ್ಯುತ್ ಭೂಗತ ಕೇಬಲ್ ಕಾಮಗಾರಿ | 4.45 | 3.78 | 16.02.2022 | 10.08.2022 | 2.86 | 3.76 | ಕಾಮಗಾರಿ ಪೂರ್ಣಗೊಂಡಿದೆ |
| | ಒಟ್ಟು | **4.45** | **3.78** | | | **2.86** | **3.76** | |

### 2022-23 ನೇ ಆರ್ಥಿಕ ವರ್ಷ

| ಕ್ರ.ಸಂ | ಕಾಮಗಾರಿಯ ಹೆಸರು | DPR ಮೊತ್ತ | ಕಾರ್ಯದೇಶ ಮೊತ್ತ | ಕಾರ್ಯದೇಶ ನೀಡಿದ ದಿನಾಂಕ | ಕಾಮಗಾರಿ ಪೂರ್ಣಗೊಂಡ ದಿನಾಂಕ | 2022-23 ರಲ್ಲಿ ಸಾಧಿಸಲಾದ ಪ್ರಗತಿ (ಕೋ.ರೂಗಳಲ್ಲಿ) | ಅಂತಿಮ ಬಿಲ್ ಮೊತ್ತ | ಕಾಮಗಾರಿಯ ಪ್ರಸ್ತುತ ಸ್ಥಿತಿ |
|---|---|---|---|---|---|---|---|---|
| 1 | ಗುಜ್ಜರಕೆರೆಯಲ್ಲಿ Aeration ಕಾರಂಜಿ ಒದಗಿಸುವ ಕಾಮಗಾರಿ | 0.41 | 0.41 | 07.05.2022 | 31.10.2022 | 0.40 | 0.40 | ಕಾಮಗಾರಿ ಪೂರ್ಣಗೊಂಡಿದೆ |
| | ಒಟ್ಟು | **0.41** | **0.41** | | | **0.40** | **0.40** | |

### 2023-24 ನೇ ಆರ್ಥಿಕ ವರ್ಷ

| ಕ್ರ.ಸಂ | ಕಾಮಗಾರಿಯ ಹೆಸರು | DPR ಮೊತ್ತ | ಕಾರ್ಯದೇಶ ಮೊತ್ತ | ಕಾರ್ಯದೇಶ ನೀಡಿದ ದಿನಾಂಕ | ಕಾಮಗಾರಿ ಪೂರ್ಣಗೊಂಡ ದಿನಾಂಕ | 2023-24 ರಲ್ಲಿ ಸಾಧಿಸಲಾದ ಪ್ರಗತಿ (ಕೋ.ರೂಗಳಲ್ಲಿ) | ಅಂತಿಮ ಬಿಲ್ ಮೊತ್ತ | ಕಾಮಗಾರಿಯ ಪ್ರಸ್ತುತ ಸ್ಥಿತಿ |
|---|---|---|---|---|---|---|---|---|
| | | | | | | | | |

# ಪ್ರಗತಿಯಲ್ಲಿರುವ ಕಾಮಗಾರಿಗಳು

## 2021-22 ನೇ ಆರ್ಥಿಕ ವರ್ಷ

| ಕ್ರ.ಸಂ | ಕಾಮಗಾರಿಯ ಹೆಸರು | SCP ಮೊತ್ತ | ಕಾರ್ಯಾದೇಶ ಮೊತ್ತ | ಕಾರ್ಯದೇಶ ನೀಡಿದ ದಿನಾಂಕ | ಕರಾರು ಪತ್ರದ ಪ್ರಕಾರ ಕೆಲಸ ಪೂರ್ಣಗೊಳಿಸಬೇಕಾದ ದಿನಾಂಕ | 2021-22 ರಲ್ಲಿ ಸಾಧಿಸಲಾದ ಪ್ರಗತಿ (ಕೋ.ರೂಗಳಲ್ಲಿ) | ಒಟ್ಟು ವೆಚ್ಚ (ಕೋಟಿಗಳಲ್ಲಿ) | ಪ್ರಸ್ತುತ ಸ್ಥಿತಿ |
|---|---|---|---|---|---|---|---|---|
| 1 | ಮಂಗಳೂರು ಮಹಾನಗರ ಪಾಲಿಕೆಗೆ ಸೇರಿದ ತುಂಬೆ ವೆಂಟೆಡ್ ಡ್ಯಾಂ ಬಳಿ ಕುಸಿದ ತಡೆಗೋಡೆ ಪುನರ್ ನಿರ್ಮಾಣ ಹಾಗೂ ಹಾಲಿ ಇರುವ ಜಾಕ್‌ವೆಲ್-2 ಪುನಶ್ಚೇತನ ಕಾಮಗಾರಿ | 10.50 | 11.50 | 25.05.2021 | 25.05.2021 | 1.09 | 7.93 | ಶೇ 81% ಕಾಮಗಾರಿ ಪೂರ್ಣಗೊಂಡಿದ್ದು, ಬಾಕಿ ಉಳಿದ ಕಾಮಗಾರಿಗಳು ಪ್ರಗತಿಯಲ್ಲಿದೆ. |
| 2 | ಉರ್ವಾ ಮಾರುಕಟ್ಟೆ ಬಳಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ | 20.54 | 36.07 | 13.08.2021 | 13.08.2023 | 6.74 | 16.10 | ಶೇ 70% ಕಾಮಗಾರಿ ಪೂರ್ಣಗೊಂಡಿದ್ದು, ಬಾಕಿ ಉಳಿದ ಕಾಮಗಾರಿಗಳು ಪ್ರಗತಿಯಲ್ಲಿದೆ. |
| 3 | ಮಂಗಳಾದೇವಿ ಬಸ್ ಟರ್ಮಿನಲ್ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಅಭಿವೃದ್ಧಿ | 4.45 | 5.85 | 30.03.2022 | 30.09.2023 | | 2.84 | ಶೇ 80% ಕಾಮಗಾರಿ ಪೂರ್ಣಗೊಂಡಿದ್ದು, ಬಾಕಿ ಉಳಿದ ಕಾಮಗಾರಿಗಳು ಪ್ರಗತಿಯಲ್ಲಿದೆ. |
| | | 35.49 | 53.42 | | | 7.83 | 26.87 | |

## 2022-23 ನೇ ಆರ್ಥಿಕ ವರ್ಷ

| ಕ್ರ.ಸಂ | ಕಾಮಗಾರಿಯ ಹೆಸರು | SCP ಮೊತ್ತ | ಕಾರ್ಯಾದೇಶ ಮೊತ್ತ | ಕಾರ್ಯದೇಶ ನೀಡಿದ ದಿನಾಂಕ | ಕರಾರು ಪತ್ರದ ಪ್ರಕಾರ ಕೆಲಸ ಪೂರ್ಣಗೊಳಿಸಬೇಕಾದ ದಿನಾಂಕ | 2022-23 ರಲ್ಲಿ ಸಾಧಿಸಲಾದ ಪ್ರಗತಿ (ಕೋ.ರೂಗಳಲ್ಲಿ) | ಒಟ್ಟು ವೆಚ್ಚ (ಕೋಟಿಗಳಲ್ಲಿ) | ಪ್ರಸ್ತುತ ಸ್ಥಿತಿ |
|---|---|---|---|---|---|---|---|---|
| 1 | ನಿರ್ದೇಶನ ಮತ್ತು ನಿಯಂತ್ರಣ ಕೇಂದ್ರ ಅನುಸ್ಥಾಪನೆ ಹಂತ-2 | 28.89 | 28.89 | 05.05.2022 | 05.05.2023 | 16.19 | 16.19 | ಶೇ 60% ಕಾಮಗಾರಿ ಪೂರ್ಣಗೊಂಡಿದ್ದು, ಬಾಕಿ ಉಳಿದ ಕಾಮಗಾರಿಗಳು ಪ್ರಗತಿಯಲ್ಲಿದೆ. |
| 2 | ಜಲಾಭಿಮುಖ ಪ್ರದೇಶ ಅಭಿವೃದ್ಧಿ ಹಂತ-1A (Promonade development) | 22.87 | 15.17 | 05.05.2022 | 05.05.2023 | 2.97 | 2.97 | ಕಾಮಗಾರಿ ಪ್ರಗತಿಯಲ್ಲಿದೆ. |
| 3 | ಜಲಾಭಿಮುಖ ಪ್ರದೇಶ ಅಭಿವೃದ್ಧಿ ಹಂತ-1B (Promonade development) | 13.56 | 8.99 | 05.05.2022 | 05.05.2023 | 2.57 | 2.57 | ಕಾಮಗಾರಿ ಪ್ರಗತಿಯಲ್ಲಿದೆ. |
| 4 | ಜಲಾಭಿಮುಖ ಪ್ರದೇಶ ಅಭಿವೃದ್ಧಿ ಹಂತ-1C (Promonade development) | 6.16 | 4.09 | 05.05.2022 | 05.05.2023 | 2.26 | 2.26 | ಕಾಮಗಾರಿ ಪ್ರಗತಿಯಲ್ಲಿದೆ. |
| 5 | ಜಲಾಭಿಮುಖ ಪ್ರದೇಶ ಅಭಿವೃದ್ಧಿ ಹಂತ-2A (Promonade development) | 15.24 | 10.11 | 05.05.2022 | 05.05.2023 | 2.65 | 2.65 | ಕಾಮಗಾರಿ ಪ್ರಗತಿಯಲ್ಲಿದೆ. |
| 6 | ಜಲಾಭಿಮುಖ ಪ್ರದೇಶ ಅಭಿವೃದ್ಧಿ ಹಂತ-2B (Promonade development) | 1.57 | 1.04 | 05.05.2022 | 05.05.2023 | 1.32 | 1.57 | ಕಾಮಗಾರಿ ಪ್ರಗತಿಯಲ್ಲಿದೆ. |
| 7 | ತಣ್ಣೀರ್‌ಬಾವಿ ಪ್ರದೇಶ ಅಭಿವೃದ್ಧಿ | 9.19 | 7.19 | 05.05.2022 | 05.05.2023 | 0.39 | 1.49 | ಕಾಮಗಾರಿ ಪ್ರಗತಿಯಲ್ಲಿದೆ. |

| | | | | | | | | |
|---|---|---|---|---|---|---|---|---|
| 8 | ಸುಲ್ತಾನ್ ಭತ್ತೇರಿ ಪ್ರದೇಶ ಅಭಿವೃದ್ಧಿ | 15.22 | 15.22 | 05.05.2022 | 05.05.2023 | 0.69 | 0.68 | ಕಾಮಗಾರಿ ಪ್ರಗತಿಯಲ್ಲಿದೆ. |
| 9 | Water jetty ಉನ್ನತ್ತೀಕರಣ | 11.71 | 9.71 | 05.05.2022 | 05.05.2023 | 0.50 | 2.09 | CRZ ಅನುಮೋದನೆಯ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. |
| 10 | ಸುಲ್ತಾನ್ ಭತ್ತೇರಿ ಪ್ರದೇಶದಲ್ಲಿ ಪಾದಚಾರಿ ಸಮುದ್ರ ನದಿ ಸಂಪರ್ಕ ಸೇತುವೆ ನಿರ್ಮಾಣ | 40.31 | 47.31 | 05.05.2022 | 05.05.2023 | 1.77 | 1.77 | CRZ ಅನುಮೋದನೆಯ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. |
| 11 | ನಯರ್ ಕುದುರ್ ಬಳಿ ಬಯಲು ರಂಗ ಮಂದಿರ ಹಾಗೂ ವಾಟರ್ ಸ್ಪೋರ್ಟ್ಸ್ ಉದ್ಯಾನವನ ಅಭಿವೃದ್ಧಿ | 49.65 | 39.65 | 05.05.2022 | 05.05.2023 | 2.16 | 1.13 | CRZ ಅನುಮೋದನೆಯ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. |
| | | **28.89** | **28.89** | | | **33.47** | **35.37** | |

## 2023–24 ನೇ ಆರ್ಥಿಕ ವರ್ಷ

| ಕ್ರ.ಸಂ | ಕಾಮಗಾರಿಯ ಹೆಸರು | SCP ಮೊತ್ತ | ಕಾರ್ಯಾದೇಶ ಮೊತ್ತ | ಕಾರ್ಯದೇಶ ನೀಡಿದ ದಿನಾಂಕ | ಕರಾರು ಪತ್ರದ ಪ್ರಕಾರ ಕೆಲಸ ಪೂರ್ಣಗೊಳಿಸಬೇಕಾದ ದಿನಾಂಕ | 2023–24 ರಲ್ಲಿ ಸಾಧಿಸಲಾದ ಪ್ರಗತಿ (ಕೋ.ರೂಗಳಲ್ಲಿ) | ಒಟ್ಟು ವೆಚ್ಚ (ಕೋಟಿಗಳಲ್ಲಿ) | ಪ್ರಸ್ತುತ ಸ್ಥಿತಿ |
|---|---|---|---|---|---|---|---|---|
| | | | | | | | | |